ID. 2/2021 PW-1

ದಿಃ 13-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಎಸ್.ಕೆ. ವಕೀಲರಿಂದ ಎದುರುದಾರರ ಪರವಾಗಿಃ**

ನಾನು ಪಿಯುಸಿಯವರೆಗೆ ಓದಿದ್ದೇನೆ. 2 ನೇ ಅರ್ಜಿದಾರರು SSLC ವರೆಗೆ ಓದಿದ್ದಾರೆ. 3 ನೇ ಅರ್ಜಿದಾರರು ಪಿಯುಸಿಯವರೆಗೆ ಓದಿದ್ದಾರೆ. 4 ನೇ ಅರ್ಜಿದಾರರು 7 ನೇ ತರಗತಿಯವರೆಗೆ ಓದಿದ್ದಾರೆ. ನನಗೆ Management ರವರು ನನ್ನ ಕೆಲಸದ ಬಾಬ್ತು ಪ್ರಶಸ್ತಿಯನ್ನು ಕೊಟ್ಟಿಲ್ಲ. 2011 ರಲ್ಲಿ ಎದುರುದಾರರಾದ ಆರಾಧ್ಯ ಕೆಮಿಕಲ್ಸ್ ಪ್ರಾರಂಭವಾಯಿತು. ನಾನು 2011 ರಲ್ಲಿಯೇ ಆ ಆರಾಧ್ಯ ಕೆಮಿಕಲ್ಸ್ ನಲ್ಲಿ ಕೆಲಸಕ್ಕೆ ಸೇರಿಕೊಂಡೆ. ಆ ಫ್ಯಾಕ್ಟರಿಯ ಪ್ರಾರಂಭವಾಗಿ 01 ತಿಂಗಳನಲ್ಲಿಯೇ ಕೆಲಸಕ್ಕೆ ಸೇರಿಕೊಂಡಿದ್ದೇನೆ. ಆ ಫ್ಯಾಕ್ಟರಿಯಲ್ಲಿ fertilisers ತಯಾರಿಸುತ್ತಾರೆ. Fertilisers ತಯಾರಿ ಮಾಡುವ technical qualification ಇರುವುದಿಲ್ಲ ಅಂದರೆ ನಿಜ. ನನಗೆ ಕೆಲಸದಿಂದ ತೆಗೆದುಹಾಕಿದರು ಈ ಸಂಸ್ಥೆ ನಡೆಯುತ್ತಿದೆ ಅಂದರೆ ನಿಜ.

ನಮ್ಮಿಂದಲೇ ಆ fertilisers ಸಂಸ್ಥೆ ಅಭಿವೃದ್ಧಿ ಆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಕಾನೂನು ಬಾಹಿರವಾಗಿ ನನ್ನನ್ನು ಕೆಲಸದಿಂದ ತೆಗೆದು ಹಾಕಿದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು Godown keeper ಆಗಿ ಕೆಲಸ ಮಾಡುತ್ತಿದ್ದೆ. ಮಂಜುನಾಥರವರು Supervisor cum Driver ಆಗಿ ಕೆಲಸ ಮಾಡುತ್ತಿದ್ದರು. 3 ಮತ್ತು 4 ನೇ ಅರ್ಜಿದಾರರು Supervisor ಆಗಿ ಕೆಲಸ ಮಾಡುತ್ತಿದ್ದರು. ಕೆಲಸಗಾರರ ಮೇಲ್ವಿಚಾರಣೆ / Supervisor ಕೆಲಸವನ್ನು ಮಾಡುತ್ತಿದ್ದೆವು. 2018 ರ ನಂತರ ನಾನು Cashier ಆಗಿ ಕೆಲಸ ಮಾಡುತ್ತಿದ್ದೆ. ನಾನು Cashier ಆಗಿ ಕೆಲಸ ಮಾಡುತ್ತಿದ್ದ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2 ರಿಂದ 4 ನೇ ಅರ್ಜಿದಾರರ ಹುದ್ದೆ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಬೆಳಿಗ್ಗೆ 9.00-9.30 ಗಂಟೆಗೆ ಕೆಲಸಕ್ಕೆ ಹೋಗುತ್ತಿದ್ದೆ. ರಾತ್ರಿ 8.30 ಗಂಟೆಗೆ ವಾಪಸ್ಸು ಬರುತ್ತಿದ್ದೆ. ವಾಪಸ್ಸು ಬರಲು ನಿರ್ದಿಷ್ಟವಾದ ಸಮಯ ಇರಲಿಲ್ಲ. ನಾವು 04 ಜನ ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದೆವು ಅಂದರೆ ಸರಿಯಲ್ಲ. ನಾವು 04 ಜನರು ಹೆಚ್ಚು ಕಡಿಮೆ

ಒಂದೇ ಸಮಯಕ್ಕೆ ಹೋಗಿ ಕೆಲಸ ಮಾಡುತ್ತಿದ್ದೆವು ಅಂದರೆ ಸರಿಯಲ್ಲ. 3 ಮತ್ತು 4 ನೇ ಅರ್ಜಿದಾರರು 24 ಗಂಟೆ ಕೆಲಸ ಮಾಡುತ್ತಿದ್ದರು. 3 ಮತ್ತು 4 ನೇ ಅರ್ಜಿದಾರರು ಮಲ್ಲಶೆಟ್ಟಿಹಳ್ಳಿಯಲ್ಲಿ ವಾಸವಿರುತ್ತಾರೆ. 3 ಮತ್ತು 4 ನೇ ಅರ್ಜಿದಾರರು ನಾನು ಹೇಳಿದ ರೀತಿಯಲ್ಲಿ 24 ಗಂಟೆ ಕೆಲಸ ಮಾಡುತ್ತಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 3 ಮತ್ತು 4 ನೇ ಅರ್ಜಿದಾರರ ಕರ್ತವ್ಯ 24 ಗಂಟೆ ಇರುವ ಬಗ್ಗೆ ಅವರು ಕಾರ್ಮಿಕ ಇಲಾಖೆಗೆ ಅರ್ಜಿಯನ್ನು ಕೊಟ್ಟಿರಲಿಲ್ಲ. Supervisor ರವರ ಸಂಬಳ ಕಾರ್ಮಿಕರ ಸಂಬಳಕ್ಕಿಂತ ಹೆಚ್ಚಿಗೆ ಇರುತ್ತದೆ ಅಂದರೆ ನಿಜ.

ನಾನು ಮತ್ತು ಉಳಿದ ಅರ್ಜಿದಾರರು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವಾಗ ಕನಿಷ್ಟ ವೇತನ ಕೊಟ್ಟಿಲ್ಲ, over time ವೇತನ ನೀಡಿಲ್ಲ, ಉಪಧನ ನೀಡಿಲ್ಲ ಮತ್ತು Statutory bonus ಕೊಟ್ಟಿಲ್ಲ ಅಂತ ಈ ಅರ್ಜಿಯಲ್ಲಿ ಬರೆಸಿದ್ದೇನೆ, ಇದರ ಬಾಬ್ತು ನಾವು ಕಾಮಿರ್ಕ ಇಲಾಖೆಗೆ ಅರ್ಜಿಯನ್ನು ಕೊಟ್ಟಿಲ್ಲ. ಆ ರೀತಿ ದೂರನ್ನು ನೀಡಲು ತೊಂದರೆ ಇರಲಿಲ್ಲ ಅಂದರೆ ನಿಜ. ಬೇರೆಯವರಿಗೆ ಸಂಸ್ಥೆಯಲ್ಲಿ ನೇಮಕ ಮಾಡಿಕೊಂಡಿರುವ ಬಗ್ಗೆ ಅವರ ಹೆಸರನ್ನು ಅರ್ಜಿಯಲ್ಲಿ ಕಾಣಿಸಿಲ್ಲ. ಆ ಸಂಸ್ಥೆಯಲ್ಲಿ ಒಟ್ಟು 20-22 ಜನ ಕೆಲಸಗಾರರು ಇರುತ್ತಾರೆ. Technical qualified ಇರುವವರನ್ನು ಮಾತ್ರ ಸಂಸ್ಥೆಯಲ್ಲಿ ನೇಮಕ ಮಾಡಿಕೊಳ್ಳುತ್ತಾರೆ ಅಂದರೆ ನಾವು ಅಲ್ಲಿ 09 ವರ್ಷ ಕೆಲಸ ಮಾಡಿದ್ದೇವೆ.

(ಈ ಹಂತದಲ್ಲಿ ವಕೀಲರು ಸಮಯ ಕೋರಿದ್ದರಿಂದ, ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.